# ಆಗೋ ಬಂತು - ಮೈ ನಡುಗಿಸುವ ಚಳಿ!

ಚಳಿಗಾಲ ಬಂದಿದೆಯೆಂದು ಹೇಗೆ ಹೇಳಬಹುದು? ತಣ್ಣಗೆ ಕೊರೆಯುವ ಗಾಳಿ, ಒಣ ಚರ್ಮ, ಬೆಚ್ಚಗಿರಲು ನಾವು ಹಾಕಿಕೊಳ್ಳುವ ಬಟ್ಟೆಗಳು, ಸಮುದ್ರ - ಪರ್ವತಗಳನ್ನು ದಾಟಿ ವಲಸೆ ಬಂದ ಹಕ್ಕಿಗಳು - ಹೀಗೆ ಅನೇಕ ಬದಲಾವಣೆಗಳನ್ನು ನಾವು ಚಳಿಗಾಲದಲ್ಲಿ ಕಾಣುತ್ತೇವೆ. ಒಮ್ಮೆ ನಿಮ್ಮ ಕಿಟಕಿಯ ಹೊರಗೆ ನೋಡಿ, ನಿಮ್ಮ ಸುತ್ತಮುತ್ತ ಓಡಾಡಿ ಗಮನಿಸಿ ನೋಡಿ - ಈ ಕೆಳಗಿನ ಯಾವುದಾದರೂ ಮೂರನ್ನು, ಅಡ್ಡಾದ ಅಥವಾ ಉದ್ದದ ಸಾಲಿನಲ್ಲಿ ಕಂಡುಹಿಡಿದು ಹೇಳಿ - 'ಆಗೋ ನೋಡು - ಚಳಿಗಾಲವಿದು!' ನೀವು ಬಳಸುವ ಕೆಳಗಿನ ಚೌಕಗಳ ಖಾಲಿ ಭಾಗದಲ್ಲಿ ನಿಮ್ಮ ವೀಕ್ಷಣೆಯ ದಿನಾಂಕ, ಸಮಯ, ಮತ್ತು ಸ್ಥಳವನ್ನು ಗುರುತು ಹಾಕಿ.




ಹಳದಿ ಅಥವಾ ಕಂದು ಬಣ್ಣದ ಎಲೆಗಳು




ಆಕಾಶದಲ್ಲಿ ಹಾರುತ್ತಿರುವ ಹಕ್ಕಿಗಳ ಹಿಂಡು



ಎಲೆಗಳು ಇಲ್ಲದ ಬರಡು ಮರ



ಸಂಜೆ ೬:೩೦ರ ಮೊದಲೇ ಸೂರ್ಯಾಸ್ತ ಆಗುವುದು



ಹುಲ್ಲಿನ ಅಥವಾ ಜೇಡದ ಬಲೆಯ ಮೇಲೆ ಇಬ್ಬನಿ



ಬೀಜಗಳು ಮತ್ತು ಬೀಜಕೋಶಗಳು



ಪ್ರಾಣಿಯೊಂದು ನಡೆದು/ಹಾದು ಹೋಗಿರುವ ಗುರುತು



ಪ್ರಾಣಿಗಳು ತಮ್ಮನ್ನು ತಾವೇ ಬೆಚ್ಚಗೆ ಇಟ್ಟುಕೊಂಡಿರುವುದು



ಪ್ರಾಣಿಯ ಗೂಡು

## ನಾನು ಕಂಡದ್ದು

ಈ ಋತುವಿನಲ್ಲಿ ನಾನು ಕಂಡ ಹೊಸ ವಿಷಯ

ಈ ಋತುವಿನಲ್ಲಿ ನನಗೆ ಕಂಡುಬರದೇ ಇರುವ ವಿಷಯ

ಈ ಋತುವಿನಲ್ಲಿ ನಾನು ಹಾಕುವ ಬಟ್ಟೆ, ತಿನ್ನುವ ಊಟ ಹಾಗು ಇತರ ದಿನ ನಿತ್ಯದ ಅಭ್ಯಾಸದಲ್ಲಿ ಆಗಿರುವ ಬದಲಾವಣೆಗಳು

## ಚಟುವಟಿಕೆಗಳು: ಪ್ರಾಣಿಗಳು ತಮ್ಮನ್ನು ತಾವೇ ಬೆಚ್ಚಗೆ ಇಟ್ಟುಕೊಳ್ಳುವ ಅವಶ್ಯಕತೆ ಇದೆಯೇ?

ಚಳಿಗಾಲದಲ್ಲಿ ನಿಮ್ಮನ್ನು ನೀವೇ ಹೇಗೆ ಬೆಚ್ಚಗೆ ಇಟ್ಟುಕೊಳ್ಳುತ್ತೀರಿ? ನೀವು ಹಾಕುವ ಬಟ್ಟೆ, ತಿನ್ನುವ ಆಹಾರ ಅಥವಾ ನಿಮ್ಮ ಮನೆಯೊಳಗಿನ ಬೆಚ್ಚಗಿನ ವಾತಾವರಣ, ಬೆಂಕಿ ಮತ್ತಿತರ ಉಪಕರಣಗಳ ಬಗ್ಗೆ ಯೋಚಿಸಿ.

ನಿಮ್ಮ ಸುತ್ತ ಕಂಡು ಬರುವ ನಾಯಿ, ಬೆಕ್ಕು, ಪಕ್ಷಿ, ಇತರ ಪ್ರಾಣಿಗಳನ್ನು ಗಮನಿಸಿ - ಚಳಿಗಾಲದಲ್ಲಿ ಅವುಗಳ ನಡುವಳಿಕೆಯಲ್ಲಿ ಆಗುವ ಬದಲಾವಣೆಗಳು ಏನು?

Illustrations & Design: Karunya Baskar
This work is licensed to Nature Classrooms
under CC BY-SA 4.0

Nature Classrooms
BENGALURU SUSTAINABILITY FORUM
Maadhyama Aneka
ಮಾಧ್ಯಮ ಅನೇಕ